ಮಂಗಳೂರನ್ನು ತಲುಪಬಹುದು. ಆದರೆ, ಕನ್ನಡ ಭಾಷೆಯಲ್ಲಿ ಏನೆಲ್ಲ ಚಟುವಟಿಕೆಗಳು ನಡೆಯುತ್ತಿವೆ ಎಂಬುದು ನನಗೆ ತಿಳಿದಿಲ್ಲ. ಇದು ದುರದೃಷ್ಟಕರ. ಈ ಅಂತರಕ್ಕೆ ಸೇತುವೆ ಕಟ್ಟಲು ನಾವು ಮಾರ್ಗಗಳನ್ನು ಹುಡುಕಿಕೊಳ್ಳಬೇಕಾದ ತುರ್ತು ಇದೆ. ವಿನಿಮಯದ ಪ್ರಯತ್ನಗಳು ದ್ರಾವಿಡ ಭಾಷೆಗಳನ್ನು ಕಾಪಿಟ್ಟುಕೊಳ್ಳುವ ಕೆಲಸದಲ್ಲಿ ತುಂಬ ಸಹಾಯಕ. ಇದು ಸಾಂಸ್ಕೃತಿಕ ಅಧ್ಯಯನಗಳಿಗೂ ಹೊಸದಿಕ್ಕನ್ನು ತೋರಿಸಬಲ್ಲದು.

◆ **ನೀವು ಹೇಳುತ್ತಿರುವ 'ಅಂತರಗಳನ್ನು ಬೆಸೆಯುವ' ತುಡಿತವು ನಿಮ್ಮ ಬಹುಪಾಲು ಕಥೆಗಳ ಹುಡುಕಾಟ ಕೂಡ ಆಗಿದೆ. ಉದಾಹರಣೆಗೆ: ನಾವು ಆಡುವ ಮಾತುಗಳ ಸರಿಯಾದ ಧ್ವನಿಯನ್ನು ಗ್ರಹಿಸದೆ ಇರುವುದರಿಂದ ಮೂಡುವ ತಪ್ಪು ತಿಳಿವಳಿಕೆಯ ಪರಿಣಾಮವಾಗಿ ಮನುಷ್ಯಸಂಬಂಧಗಳಲ್ಲಿ ಹುಟ್ಟುವ ಬಿರುಕುಗಳನ್ನು, ದುರಂತಗಳನ್ನು ಚಿತ್ರಿಸುವ 'ತಾಜಮಹಲಿನ ಖೈದಿಗಳು' ಕಥೆ; ನಮ್ಮ ಪೂರ್ವನಿರ್ಧರಿತ ಗ್ರಹಿಕೆಗಳಿಂದ ಉಂಟಾಗುವ ತಪ್ಪುಗ್ರಹಿಕೆಗಳನ್ನು ತೋರಿಸಿಕೊಡುವ 'ಸಿಂಡ್ರೆಲಾ' ಕಥೆ ಅಥವಾ 'ನಗರದ ಕೋಗಿಲೆ'ಯಂತಹ ಕಥೆಗಳಲ್ಲಿ ಮನುಷ್ಯ ಮನಸ್ಸುಗಳ ನಡುವಿನ ಅಂತರದ ಬಗ್ಗೆ ನಿಮ್ಮ ತೀವ್ರವಾದ ಚಿಂತನೆಯು ಸ್ಪಷ್ಟವಾಗಿ ಕಂಡುಬರುತ್ತದೆ. ಪ್ರೇಮದ ಅತ್ಯಂತಿಕ ಸಂಕೇತವಾಗಿ ನಮ್ಮ ಮುಂದಿರುವ 'ತಾಜಮಹಲು' ಮತ್ತು ಅದನ್ನು ನೋಡಲು ಹೋಗುವ ದಂಪತಿಗಳ ಬದುಕನ್ನು ನಿಮ್ಮ ಕಣ್ಣುಗಳ ಮೂಲಕ ನೋಡಿದಾಗ, ಸಂಬಂಧಗಳನ್ನು ಸರಿಯಾಗಿ ಅರಿಯದೆ ಹೋದರೆ ಪ್ರೇಮ ಅನ್ನುವ ತಾಜಮಹಲಿನ ಒಳಗೆ ನಾವೆಲ್ಲ ಬಂಧಿಸಲ್ಪಟ್ಟ ಖೈದಿಗಳೇ ಅನ್ನಿಸುತ್ತದೆ.**

ಯಾವ ಸಮಾಜವು ಹೆಣ್ಣನ್ನು ಹತ್ತಿಕ್ಕುತ್ತದೆಯೋ ಅದು ಕೆಟ್ಟ ಸಮಾಜ. ಭಾರತದ ಯಾವ ಶಾಲೆಯಲ್ಲಿ ಲಿಂಗ ಸಮಾನತೆಯ ಬಗ್ಗೆ ಸರಿಯಾದ ಶಿಕ್ಷಣ ನೀಡುತ್ತಿದ್ದಾರೆ ನೀವೇ ಹೇಳಿ. ನಮ್ಮ ನಿಮ್ಮ ಮನೆಗಳಲ್ಲಿ ಇದರ ಬಗ್ಗೆ ಅರಿವು ಮೂಡಿಸುತ್ತಾರಾ? ಇಲ್ಲ. ಆ ಬದಲಾವಣೆಯು ಎರಡನೇ ಮಹಾಯುದ್ಧದ ಫಲವಾಗಿದ್ದರೂ, ಪಾಶ್ಚಿಮಾತ್ಯರು ಗಂಡು ಮತ್ತು ಹೆಣ್ಣಿನ ಸಮಾನತೆಯ ನೆಲೆಯಲ್ಲಿ ಸಾಧಿಸುತ್ತಿರುವ ಸಾಂಸ್ಕೃತಿಕ ಪ್ರಗತಿಯಿಂದ ನಾವೆಲ್ಲರೂ ಕಲಿಯಬೇಕಿದೆ. ಇಲ್ಲಿ ಮೂಲಭೂತ ವಿಷಯ ಅಂದ್ರೆ, ಸಮಾನತೆಯ ಪರಿಕಲ್ಪನೆ. ಎಲ್ಲಿ ಸಮಾನತೆಯ ಆಲೋಚನೆ ಇರೋದಿಲ್ವೋ ಅಲ್ಲಿ ಸಂವಹನ ಸಾಧ್ಯವಿಲ್ಲ. ಎಲ್ಲಿ ಭಾಷೆಯ ಬಳಕೆ ಸರಿ ಇರೋದಿಲ್ವೋ ಅಲ್ಲಿ ಪ್ರೀತಿ ಮತ್ತು ಪರಸ್ಪರ ಅರ್ಥಮಾಡಿಕೊಳ್ಳುವಿಕೆಯೂ ಸಾಧ್ಯವಿಲ್ಲ. ಕಳೆದ ಅರ್ಧ ಶತಮಾನದಲ್ಲಿ ಹೆಣ್ಣುಮಕ್ಕಳಿಗೆ ಒಂದಷ್ಟು ಸಾಂತ್ವನ ಸಿಕ್ಕಿದೆಯಾದರೆ, ಅದು ಸಿಕ್ಕಿರುವುದು ವಿಜ್ಞಾನದ ಆವಿಷ್ಕಾರದಿಂದ ಉಂಟಾದ ಮನೆಬಳಕೆ ವಸ್ತುಗಳಿಂದ. ನನ್ನಮ್ಮ ಬೆಳಗ್ಗೆ ಐದು ಗಂಟೆಗೇ ಎದ್ದು ರಾತ್ರಿ ಹನ್ನೆರಡರ ತನಕ ಮಾಡಬೇಕಾಗಿದ್ದ ಕೆಲಸವನ್ನು, ನನ್ನ ಅಕ್ಕತಂಗಿಯರು ಹಗಲಿನಲ್ಲಿಯೇ ನಿರಾಳವಾಗಿ ಮಾಡುತ್ತಿದ್ದಾರೆ. ಇದು ಸಾಧ್ಯ ಆಗಿದ್ದು ಗಂಡಸರ ದೃಷ್ಟಿಕೋನದಲ್ಲಿ ಉಂಟಾದ ಬದಲಾವಣೆಯಿಂದ ಅಲ್ಲ. ಬದಲಾಗಿ, ವಾಶಿಂಗ್ ಮೆಶೀನು, ಗ್ರೈಂಡರ್, ಗ್ಯಾಸ್ ಸ್ಟೌವ್, ಮಿಕ್ಸಿ, ಪ್ರೆಶರ್ ಕುಕ್ಕರ್ ಇತ್ಯಾದಿ ಸಲಕರಣೆಗಳಿಂದ. ಇವೆಲ್ಲವೂ ವಿಜ್ಞಾನ ಮತ್ತು ತಂತ್ರಜ್ಞಾನಗಳು ಹೆಣ್ಣುಮಕ್ಕಳಿಗೆ ನೀಡಿದ ಬಳುವಳಿಗಳು. ಅವರವರ ಆರ್ಥಿಕ ಶಕ್ತಿಗೆ ಅನುಗುಣವಾಗಿ ಈ ಸಲಕರಣೆಗಳು ಹೆಣ್ಣುಮಕ್ಕಳಿಗೆ ಸಾಕಷ್ಟು ಸಹಾಯ ಮಾಡಿವೆ. ಆದರೆ, ಗಂಡಸರ ದೃಷ್ಟಿಕೋನದಲ್ಲಿ ಆಗಿರುವ ಬದಲಾವಣೆ ಸ್ವಲ್ಪವೇ ಸ್ವಲ್ಪ. ಸಂವಹನದ ಕೊರತೆಯಿಂದ ಸಂಬಂಧದಲ್ಲಿ ಏಳುವ ಅಸಮಾಧಾನಗಳ ಕುರಿತು ನೀವು ಉದಾಹರಿಸಿದ ನನ್ನ ಕಥೆಗಳೇನಿವೆ ಅವು ವೈಚಾರಿಕ ಜಗತ್ತಿನಲ್ಲಿ ಉಂಟಾಗಿರುವ ಅತ್ಯಲ್ಪ ಪ್ರಗತಿಯ ಕುರಿತಾದ ನನ್ನ ಆಲೋಚನೆಗಳಿಂದ ಉಂಟಾದವು. ಒಬ್ಬ ಗಂಡಸು ಹೆಣ್ಣನ್ನು ದಮನಿಸಲು ಯತ್ನಿಸುವಾಗೆಲ್ಲ ಅಪ್ರಜ್ಞಾಪೂರ್ವಕವಾಗಿ ಸ್ವತಃ ಅವನೂ ಬಲಿಯಾಗುತ್ತಿರುತ್ತಾನೆ. ಇದು ಸೃಷ್ಟಿಯ, ಸಮನ್ವಯದ ಹಿಂಚಲನೆ.

◆ **ನೀವು ಕಥೆ ಬರೆಯುವ ಹಿಂದಿನ ಪ್ರೇರಣೆ ಏನು?**

ಇದಕ್ಕೆ ಉತ್ತರ ಖಚಿತವಾಗಿ ನನಗೂ ಗೊತ್ತಿಲ್ಲ. ಬಹುಪಾಲು ಕಥೆಗಳು ನನ್ನ ಅನುಭವಗಳಿಂದಲೇ